


**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2018; 4(7): 310-312
www.allresearchjournal.com
Received: 16-05-2018
Accepted: 18-06-2018

**ಅಂಬಾದಾಸ ಅಣ್ಣಪ್ಪ ಕಾಂಬಳ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

**Correspondence**
**ಅಂಬಾದಾಸ ಅಣ್ಣಪ್ಪ ಕಾಂಬಳ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

# ಕಲ್ಯಾಣ ನಾಡಿನ ಕಲ್ಪತರು ಹಾರಕೂಡದ ಹಿರೇಮಠ ಸಂಸ್ಥಾನ

**ಅಂಬಾದಾಸ ಅಣ್ಣಪ್ಪ ಕಾಂಬಳ**

ಕಲ್ಯಾಣ ನಾಡು ಶರಣರ ಸಂತರ ನೆಲೆಬೀಡು. ಪುಣ್ಯ ಪುರುಷರನ್ನು ಜಗತ್ತಿಗೆ ನೀಡಿದ ಪುಣ್ಯಭೂಮಿ. ಧರ್ಮ ಸಮನ್ವಯತೆಯ ಆಗರವಾದ ಈ ನೆಲ, ಹನ್ನೆರಡನೆಯ ಶತಮಾನದ ಬಸವಾದಿ ಶರಣರ ಮೂಲಕ ಆಧ್ಯಾತ್ಮಿಕ ಸಮಾಜೋಧಾರ್ಮಿಕ ಚಳುವಳಿಯಿಂದ ಪ್ರಭಾವಿತವಾದ ಕೇಂದ್ರಸ್ಥಾನವಾಯಿತು. ಬಸವಾದಿ ಪ್ರಮಥರ ಮಾರ್ಗದಲ್ಲಿಯೇ ಆಧ್ಯಾತ್ಮಿಕ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದವರೇ ಹಾರಕೂಡ ಸಂಸ್ಥಾನ ಹಿರೇಮಠದ ಶ್ರೀ ಚನ್ನಬಸವಶಿವಯೋಗಿಗಳು. ಇವರಿಂದಾಗಿ ಹಾರಕೂಡದ ಹಿರೇಮಠ ಸಂಸ್ಥಾನವು ವೀರಶೈವ ಧರ್ಮ ಚಿಂತನೆಯ ಜಾಗೃತ ಸುಕ್ಷೇತ್ರವಾಗಿದೆ. ಈ ಮಠವು ಪಂಚಪೀಠಗಳಲ್ಲಿ ಒಂದಾದ ರಂಭಾಪುರಿ ಮಠದ ಶಾಖಾಮಠವಾಗಿದೆ ಎಂದು ಪ್ರಸ್ತುತ ಪೂಜ್ಯರು ಹೇಳಿದ್ದಾರೆ. ಈ ಸಂಸ್ಥಾನ ಮಠದ ಗುರು ಪರಂಪರೆಯಲ್ಲಿ ಏಳು ಜನ ಪೀಠಾಧಿಪತಿಗಳಾಗಿ ಧರ್ಮಜಾಗ್ಧತ ಕೈಕಂರ್ಯ ಮಾಡಿ ಹೋಗಿದ್ದಾರೆ. ಅವರ ತರುವಾಯದಲ್ಲಿ ಪಿಠವನ್ನಲಂಕರಿಸಿದ ಪ್ರಸ್ತುತ ಎಂಟನೆಯ ಪೀಠಾಧಿಪತಿ ಚರಕೂಲ ಭೂಷಣರಾದ ಪೂಜ್ಯಶ್ರೀ ಷ.ಬ್ರ. ಡಾ. ಚನ್ನವೀರ ಶಿವಾಚಾರ್ಯರು ಭಕ್ತರ ಕಾಮದೇನು, ಕಲ್ಪರತರು, ನಡೆದಾಡುವ ದೇವರು ಎಂದು ಪ್ರಖ್ಯಾತರಾದವರು.

ಬಹು ಪ್ರಾಚೀನ ಇತಿಹಾಸವನ್ನು ಹೊಂದಿದ ಹಾರಕೂಡದ ಬೃಹನ್ಮಠ ಹಿರೇಮಠದ ಮೂಲ ಸ್ಥಾಪಕರು ಸದ್ಗುರುಶ್ರೀ ಸಂಗನಬಸವಸ್ವಾಮಿಗಳು. ಇವರ ತರುವಾಯದಲ್ಲಿ ಬಂದವರು ಜಪತಪಗಳಲ್ಲಿ ಕಾಲಕಳೆಯುತಿದ್ದವರು, ತಪೋನಿಧಿಗಳು ಎಂದು ತಿಳಿದುಬರುತ್ತದೆ. ಈ ಮಠಕ್ಕೆ ಆರನೇಯ ಪೀಠಾಧಿಪತಿಯಾಗಿ ಬಂದವರು ಶ್ರೀ ಚೆನ್ನಬಸವ ಶಿವಯೋಗಿಗಳು. ಇವರಿಂದಲೇ ಶ್ರೀಮಠಕ್ಕೆ ಆಧ್ಯಾತ್ಮದತ್ತ ಒಲವು ಭಕ್ತಿರಲ್ಲಿ ತುಂಬಿತ್ತು ಎಂಬ ಉಲ್ಲೇಖ ಇಲ್ಲಿ ಕಂಡು ಬರುತ್ತದೆ. ಅಂದು ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆದು ಪ್ರಖ್ಯಾತರಾದವರು ಎಂಟನೆಯ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು.

ಪೂಜ್ಯ ಶ್ರೀ ಷ.ಬ್ರ. ಚನ್ನವೀರ ಶಿವಾಚಾರ್ಯರು ಹಾರಕೂಡದ ವೇ॥ ಕರಿಬಸಯ್ಯ ಮತ್ತು ಸಾಧ್ವಿ ಸುಭದ್ರಾತಾಯಿ ಅವರ ನಾಲ್ಕನೇಯ ಮಗನಾಗಿ ದಿ.01-07-1963ರಂದು ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ರೇವಣಸಿದ್ಧ. ಕೇವಲ ಆರು ವರ್ಷದ ಮುಗ್ಧ ಹಾಲುಗಲ್ಲದ ಬಾಲಕನನ್ನು ನೋಡಿದ ಶ್ರೀ ಗುರುಲಿಂಗ ಶಿವಾಚಾರ್ಯರು ಹಾರಕೂಡ ಹೀರೇಮಠ ಸಂಸ್ಥಾನದ ಮುಂದಿನ ಉತ್ತರಾಧಿಕಾರಿಯಂದು ಘೋಷಿಸಿದರು. ಇವರ ತಂದೆ ಪ್ರಖ್ಯಾತ ಸಂಗೀತ ರಂಗ ಕಲಾವಿದರಾದ ವೇದಮೂರ್ತಿ ಕರಬಸಯ್ಯನವರಾದರೆ ಸುಸಂಸ್ಕೃತ ಸಂಪನ್ನೆ ಶ್ರೀಮತಿ ಸುಭದ್ರಾತಾಯಿ ತಾಯಿಯವರ ಪ್ರೇಮ ಇವರಲ್ಲಿ ಬೇರೂರಿತು. ಇವರ ಶಿಕ್ಷಣ ಮನೆಯಿಂದಲೇ ಆರಂಭವಾಯಿತು. ಔಪಚಾರಿಕ ಶಿಕ್ಷಣವು ಹಾರಕೂಡದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. ಕಲಬುರಗಿಯ ಶ್ರೀ ಶರಣಬಸವೇಶ್ವರ ಪ್ರೌಢಶಾಲೆಯಲ್ಲಿಯು ಶಿಕ್ಷಣ ಪಡೆದರು. ಪ್ರಸಿದ್ಧ ಬಸವರಾಜ ದೇಶಮುಖ ಹಾಬಾಳದವರ ಮನೆಯಲ್ಲಿದ್ದು ಅಧ್ಯಯನ ಮಾಡಿದರು. ಮುಂದೆ ಉನ್ನತ ವಿದ್ಯಾಭ್ಯಾಸ ಮಾಡಲು ಹುಬ್ಬಳ್ಳಿಗೆ ತೆರಳಿದರು. ಮೂರು ಸಾವಿರ ಮಠದ ಜಗದ್ಗುರು ಡಾ॥ ಗಂಗಾಧರ ಗುರುಸಿದ್ಧರಾಜಯೋಗಿಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನ ಪಡೆದು ಅಂದಿನ ಪ್ರಸಿದ್ಧ ಶ್ರೀ ಕುಮಾರೇಶ್ವರರ ಶಿವಯೋಗ ಮಂದಿರದಲ್ಲಿ ಪ್ರವೇಶ ಪಡೆದರು.

ಹುಬ್ಬಳ್ಳಿಯಲ್ಲಿಯೇ ಇವರು ಅಪಾರ ಅಧ್ಯಯನವನ್ನು ಭಕ್ತಿ-ಶ್ರದ್ಧೆಯಿಂದ ಮಾಡಿ, ಸ್ವಾಮಿಗಳಾಗುವ ಎಲ್ಲಾ ಅರ್ಹತೆ ಹೊಂದಿದರು. ಸಾಧಕರಾಗಿ ಬೆಳಗಿದರು. ಇವರ ಪ್ರೀತಿ, ಸಮಯ ಪ್ರಜ್ಞೆ ಕರ್ತವ್ಯ ನಿಷ್ಠತೆ, ಉತ್ತಮ ನಡೆತೆಯಿಂದ ಅಲ್ಲಿನ ಗುರುಗಳ ಮತ್ತು ಜಗದ್ಗುರುಗಳ ಪ್ರೀತಿಗೆ ಪಾತ್ರರಾದರು. ಹುಬ್ಬಳ್ಳಿಯ ಪ್ರತಿಷ್ಠಿತ ಕೆ.ಎಲ್.ಇ ಸಂಸ್ಥೆಯ ಶ್ರೀಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡಿದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಪದವಿ (1984) ಹೊಂದಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಎಂ.ಎ. ಕನ್ನಡ ಪದವಿಯನ್ನು ಪಡೆದರು.

1986ರಲ್ಲಿ ಪ್ರಥಮ ವರ್ಗದಲ್ಲಿ ಪಾಸಾದರು. ತಾವು ಕಲಿತ ಅಧ್ಯಯನ ಸಂಸ್ಥೆಗೆ ವಿಶ್ವವಿದ್ಯಾಲಯಕ್ಕೆ ಹಾರಕೂಡದ ಭಕ್ತರೆಲ್ಲರಿಗೂ ಪ್ರೀತಿ ಸಂತಸ ನೀಡಿದರು. ಅಲ್ಲದೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ ಪಡೆದರು.

ಪೂರ್ವಾಶ್ರಮದ ತಂದೆ-ತಾಯಿ ಅಥವಾ ಭಕ್ತರು ವಿದ್ಯಾಭ್ಯಾಸಕ್ಕೆ ಅಡ್ಡಿ ಮಾಡಲಿಲ್ಲ. ಚನ್ನಬಸವ ಶಿವಯೋಗಿಗಳು ಲೋಕಲ್ಯಾಣವನ್ನೆ ಬಯಸಿದರು. ಪೂಜ್ಯಶ್ರೀ ಷ.ಬ್ರ. ಡಾ. ಚನ್ನವೀರ ಶಿವಾಚಾರ್ಯರರ ತಂದೆ ಅಪಾರ ಜನರ ಪ್ರೀತಿಗೆ ಪಾತ್ರರಾಗಿದ್ದವರು. ಭಕ್ತರ ಮನಸ್ಸಿಗೆ ನೋವಾಗಬಾರದೆಂಬ ಆತಂಕವನ್ನು ದೂರ ಮಾಡುವ ಇಚ್ಛೆ ಆಗಾಗ ಅವರಿಗೆ ಹೊಳೆಯುತ್ತಿತ್ತು. ಕೊನೆಗೂ ಸಣ್ಣ ಮಠವನ್ನು ಬೆಳೆಸುವುದು ಹೇಗೆ ಎಂದು ಯೋಚಿಸಿದರು. ಸಕಲ ಜೀವಾತ್ಮರಿಗೆ ಲೇಸು ಬಯಸುವ ಮನವ ಕಲ್ಯಾಣ ಮಾನವೀಯ ಮೌಲ್ಯ ಎತ್ತಿ ಹಿಡಿಯುವ ಕೆಲಸ ತಮ್ಮಿಂದ ಆಗಬೇಕೆಂದು ಸಂಕಲ್ಪ ಮಾಡಿದರು. ಜಾತ್ಯಾತೀತ ಮನೋಭಾವನೆ ಹೊಂದಿದರು. ಭಕ್ತ ಇಶ್ಯಾರ್ಥಗಳನ್ನು ಪೂರೈಸಿದರು.

ಶಿವಾಚಾರ್ಯರರ ಚಿತ್ತ ವಿದ್ಯಾಭ್ಯಾಸದಲಿಯೇ ಇರುತ್ತಿತ್ತು. ಆದರಲ್ಲಿಯೇ ತಲ್ಲೀನರಾಗಿ ಅಧ್ಯಯನ ಮಾಡಿವುದು ಅವರ ಹವ್ಯಾಸವಾಗಿ ಬಿಟ್ಟಿತ್ತು. ಇವರನ್ನು ಅಧ್ಯಯನದಿಂದ ನೇರವಾಗಿ ಮಠಕ್ಕೆ ಕರೆತಂದು ಭಕ್ತಾದಿಗಳು ಶರಣರು, ಸಂತರು ಸಂಕಲ್ಪಮಾಡಿ ದಿ.25-04-1996 ರಂದು ವಿಜೃಂಭಣೆಯಿಂದ ಹಾರಕೂಡದ ಮಠದ ಪೀಠಾಧಿಕಾರಿಯನ್ನಾಗಿ ಮಾಡಿದರು. ಅನೇಕ ಹರಗುರು ಚರಮೂರ್ತಿಗಳು, ಅಂದು ಆಶೀರ್ವಚನ ನೀಡಿದರು. ಇದರ ನೆನಪಿಗೆ ಚೆನ್ನವೀರ ಎಂಬ ಸ್ಮರಣ ಗ್ರಂಥ ಡಾ॥ ಸಂಗಮೇಶ ಸವದತ್ತಿಮಠರ ಸಂಪಾದಕತ್ವದಲ್ಲಿ ಲೋಕಾರ್ಪಣೆಗೊಂಡಿತು. ಈ ಸ್ಮರಣ ಸಂಚಿಕೆ ಕಲ್ಯಾಣ ನಾಡಿನ ಸಂಶೋಧನಾತ್ಮಕ ಹಾಗೂ ಆಕರವಾಗುವ ಲೇಖನಗಳನ್ನು ಒಳಗೊಂಡು ಅಪರೂಪದ ಕೃತಿಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಪೂಜ್ಯರು ಹಿಂದೂ ವೀರಶೈವ, ಲಿಂಗಾಯತ, ಮುಸ್ಲಿಂ, ಕ್ರೈಸ್ತ, ಬೌದ್ಧ ಹೀಗೆ ಹಲವು ಧರ್ಮಗಳ ಬಗ್ಗೆ ಅಪಾರ ಪ್ರೀತಿ ಕಳಕಳಿಯನ್ನು ಹೊಂದಿದ್ದಾರೆ. ಜೊತೆಗೆ ತಮ್ಮದೇ ಆದ ವೀರಶೈವ ಧರ್ಮದಲ್ಲಿರುವ ವೈಚಾರಿಕೆ ವೈಜ್ಞಾನಿಕ ಪ್ರಗತಿಪರ ಚಿಂತನೆಯ ಕಡೆ ಮುಖ ಮಾಡಿ ಭಕ್ತರಿಗೆ ಲೋಕ ಕಲ್ಯಾಣದ ತತ್ವ ಭೋಧಿಸುತ್ತಿದ್ದಾರೆ. ಅಷ್ಟಾವರಣ, ಷಟಸ್ಥಲ, ಪಾಂಚಾಚಾರ, ಕಾಯಕ ದಾಸೋಹ ಇವರ ಕಣ್ಣುಗಳು. ಶರಣರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ಪೂಜ್ಯ ಚನ್ನಬಸವ ಶಿವಯೋಗಿಗಳಂತಹ ತಪಸ್ವಿಗಳು ಮೌನ ಆರಾಧಕರು. ಅವರ ಮಾತೇ ಮಂತ್ರವಾಗಿತ್ತು. ಅಂತಹ ದಿವ್ಯ ಶಕ್ತಿ ಕಂಡವರಾಗಿದ್ದು, ಇವರೆಲ್ಲರ ಪವಾಡಗಳು ಕಾರ್ಯ ಚಟುವಟಿಕೆಗಳನ್ನು ಕಣ್ಣಾರೆ ಕಂಡು ಅವನ್ನು ಪ್ರಾಯೋಗಿಕವಾಗಿ ಜಾರಿಗೆ ತರಲು ಪೂಜ್ಯ ಚನ್ನವೀರ ಶಿವಾಚಾರ್ಯರು ಕಂಕಣ ಬದ್ಧರಾದರು. ಹಿಂದೂ-ಮುಸ್ಲಿಂ ಭಾವೈಕ್ಯತೆಯ ಕೊಂಡಿಯಾಗಿದ್ದರು. ತಮ್ಮ ಗುರುಗಳಿಗೂ ಒಂದು ಹೆಜ್ಜೆ ಮುಂದು ಎಂಬಂತೆ ಪ್ರಸ್ತುತ ಪೂಜ್ಯರು ಕಾರ್ಯ ಮಾಡುತ್ತಿದ್ದಾರೆ. ತಮ್ಮ ಮೂಲ ಶಿವಯೋಗಿಯ ಮೂರ್ತಿ ಮುಂದೆ ಬುದ್ಧ-ಬಸವ-ಅಂಬೇಡ್ಕರ್ ಅವರ ಭಾವಚಿತ್ರ ಇಟ್ಟಿದ್ದು ಸರ್ವಧರ್ಮಗಳ ಸಮನ್ವಯತೆಯ ಸಂಕೇತವಾಗಿ ಪ್ರತಿನಿದಿಸುತ್ತಿದೆ. ಸ್ವತಃ ತಮ್ಮ ಮಠದ ಆವರಣದಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಅವರ ಮೂರ್ತಿ ಪ್ರತಿಷ್ಠಾಪನೆಗೆ ಜಾಗ ನೀಡಿದ್ದು ಪ್ರತಿವರ್ಷ ಪೂಜೆ ಸಲ್ಲಿಸುತ್ತಿರುವುದು ಸರ್ವಧರ್ಮದ ಭಕ್ತರು ಕಣ್ಣಾರೆ ಕಂಡು ಭಾವತುಂಬಿಕೊಂಡು ಬಾಗವಹಿಸಿದ್ದಾರೆ. ಈ ಕ್ಷೇತ್ರದಲ್ಲಿ ಜಾತಿಗಳಲ್ಲಿ ಮೇಲು ಕೀಳು ಎಂಬುದಿಲ್ಲ. ಮಾನವ ಜಾತಿ ಒಂದೇ ಜಾತಿ ಎಂಬ ತತ್ವದಿಂದಾಗಿ ಶ್ರೀಮಠವು ಸರ್ವಜನಾಂಗದ ಶಾಂತಿಯ ತೋಟವಾಗಿದೆ.

ಪಂಚಮಿಯಿಂದ ಸಪ್ತಮಿಯವರೆಗೆ ಹಾರಕೂಡದ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಜಾತ್ರೆ ಪ್ರತಿವರ್ಷ ಅದ್ದೂರಿಯಾಗಿ ನಡೆಯುತ್ತದೆ. ಕರ್ನಾಟಕ ಆಂಧ್ರ ಹಾಗೂ ಮಹಾರಾಷ್ಟ್ರದಿಂದ ಮೂಲೆ ಮೂಲೆಗಳಿಂದ ಭಕ್ತ ಸಮೂಹ ಬರುತ್ತದೆ. ಇಲ್ಲಿ ಸಾಂಸ್ಕೃತಿಕ ಜಾತ್ರೆಯಾಗುವಂತೆ ಧಾರ್ಮಿಕ ಆಚರಣೆಗಳು, ಪುರಾಣ ಪ್ರವಚನಗಳು, ಶಿವಾನುಭವಗೋಷ್ಠಿ, ಉಪನ್ಯಾಸ, ಸಂಗೀತ ಕಾರ್ಯಕ್ರಮಗಳು, ಜನಪದ ಕಲಾಮೇಳಗಳ ಕ್ರೀಡೆ, ಜಂಗಿ ಕುಸ್ತಿ ಹಾಗೂ ಪಶು ಪ್ರದರ್ಶನಗಳು ಈ ಕ್ಷೇತ್ರದಲ್ಲಿ ಒಂದರಕಿಂಲೂ ಮತ್ತೊಂದು ಆಕರ್ಷಕವಾಗಿರುವುದು ವಿಶೇಶವಾಗಿದೆ. ರಥೋತ್ಸವಗಳು ಜರುಗುವ ಮೂಲಕ ಜನರಲ್ಲಿ ಧಾರ್ಮಿಕ ಚಿಂತನೆಯ ಬೀಜ ಬಿತ್ತುತ್ತಾರೆ. ರುದ್ರಾಭಿಷೇಕ ನಂದಿಕೋಲ ಕುಣಿತ ಡೊಳ್ಳು ಬಾಜಾ ಭಜಂತ್ರಿ ಪಲ್ಲಕ್ಕಿ ಉತ್ಸವವು ಜರುಗುವುದು. ನಮ್ಮ ನಾಡಿನ ಜಾನಪದೀಯ ಕಲೆಗಳ ಉಳಿಸುವಿಕೆ ಶ್ರೀಮಠದಲ್ಲಿ ನಡೆದು ಬಂದಿದೆ. ಅಲ್ಲದೆ ಇಲ್ಲಿನ ಸಂಗೀತ ದರ್ಬಾರ್ ಅದ್ಭುತವಾದ ನಾದಲೋಕವನ್ನೆ ಧರೆಗಿಳಿದು ಬಂದಂತೆ ಅನುಭವವಾಗುತ್ತದೆ. ಇಂತಹ ವಿಶಿಷ್ಠ ಆಚರಣೆಗಳಿಂದ ಶ್ರೀಮಠವು ಶ್ರೀಮಂತವಾಗಿದೆ.

ಹಾರಕೂಡದ ಹಿರೇಮಠ ಸಂಸ್ಥಾನವು ಕರ್ನಾಟಕ ರಾಜ್ಯದಲ್ಲಿಯೇ ಅತಿ ದೊಡ್ಡ ಎರಡನೇಯ ಕುಸ್ತಿ ಕ್ರೀಡಾಂಗಣ ಹೊಂದಿದೆ. ಪ್ರತಿ ವರ್ಷ ಜಂಗಿ ಕುಸ್ತಿ ನಡೆಯುತ್ತವೆ. ನಾಡಿನ ಬಹು ದೊಡ್ಡ ಪೈಲ್ವಾನರು ಬರುತ್ತಾರೆ. ಇಲ್ಲಿನ ಐದು ದಶಕಗಳ ಇತಿಹಾಸ ಪರಂಪರೆಯ ಕುಸ್ತಿಗೆ ಹಾರಕೂಡ ಸುಕ್ಷೇತ್ರ ಸಾಕ್ಷಿಯಾಗಿದೆ. ಸುತ್ತಮುತ್ತಿನ ರಾಜ್ಯದ ಪ್ರಮುಖ ಪೈಲ್ವಾನರು ಬಂದು ತಮ್ಮ ಸ್ಪರ್ಧೆ ನೀಡಿ ಹೋಗಿದ್ದಾರೆ. ಗೆದ್ದವರಿಗೆ ಪ್ರಶಸ್ತಿ ಬಹುಮಾನ ನೀಡಿ ಗೌರವಿಸುವುದು ಶ್ರೀಮಠದ ಪರಂಪರೆಯಾಗಿದೆ. ಇಂತಹ ಚಟುವಟಿಗಳು ಶ್ರೀಗಳ ಕ್ರೀಡಾ ಪಟುಗಳಿಗೆ ಪ್ರೋತ್ಸಾಹಿಸುವ ಪ್ರವೃತ್ತಿಯನ್ನು ಬಿಂಬಿಸುವುದು ಕಂಡು ಬರುತ್ತದೆ.

ಸದ್ಗುರು ಚೆನ್ನಬಸವ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಐವತ್ತು ವರ್ಷಗಳಿಂದ ಗೀಗೀ ಪದ, ಲಾವಣಿಕಾರರು, ತತ್ವ ಪದಕಾರರು, ಭಜನೆ ಹಾಡುಗಾರ, ನಾಟಕ, ಪುರವಂತಿಕೆ ಸೇವೆ, ಡೊಳ್ಳು ಮೇಳ, ಜಾನಪದ ಮೇಳ, ಪಶು ಪ್ರದರ್ಶನ, ಉತ್ತಮ ಪಶುಗಳಿಗೆ ಚಿನ್ನದ ಬಹುಮಾನ ನೀಡಿ ಸತ್ಕರಿಸುತ್ತಿದ್ದಾರೆ. ಸಕಲ ಜೀವಾತ್ಮರಿಗೆ ಲೇಸು ಬಯಸುವುದು ಪೂಜ್ಯ ಚೆನ್ನವೀರ ಶರಣರ ಮೂಲೋದ್ದೇಶವಾಗಿದೆ.

ಶ್ರೀಮಠದಲ್ಲಿ ಯಾವಾಗಲು ಸಂಗೀತ ಕಾರ್ಯಕ್ರಮ ಜರುಗಿತ್ತಿದ್ದವು. ಆದರೆ ಅದಕ್ಕೊಂದು ವಿಶಿಷ್ಟವಾದ ಮಾರ್ಗವನ್ನು ಶ್ರೀಗಳು ತೋರಿದ್ದಾರೆ. ಸಣ್ಣ ಕಲಾವಿದರಾಗಿರಲಿ ಖ್ಯಾತ ಗಾಯಕರಾಗಿರಲಿ ಮೂಕ್ತವಾಗಿ ಸಂಗೀತಗಾರರಿಗೆ ಸೂಕ್ತ ವೇದಿಕೆ ನೀಡುತ್ತಾ ಬಂದಿದ್ದಾರೆ. ಸಂಗೀತ ದರ್ಬಾರದಲ್ಲಿ ಪ್ರಖ್ಯಾತ ಸಂಗೀತಗಾರರಾದ ಸಿದ್ಧಾರಾಮ ಜಂಬಲದಿನ್ನಿ, ಉಪೇಂದ್ರ ಭಟ್, ನರಸಿಂಹಲು ವಡವಾಟಿ, ಎಂ.ವೆಂಕಟೇಶ ಕುಮಾರ, ನನ್ನೇಬಾಬು ಪಾಕಿಸ್ಥಾನ ಹನುಮಣ್ಣ ನಾಯಕ ದೊರೆ ಶಾಂತಲಿಂಗ ದೇಸಾಯಿ, ಶೇಶಪ್ಪ ಗಬ್ಬೂರು, ರೇವಯ್ಯ ವಸ್ತ್ರದ, ಸಂಗೀತ ಕಟ್ಟಿ, ವಿರೂಪಾಕ್ಷಯ್ಯ ಸ್ವಾಮಿ ಗೋರ್ಟಾ ಅಲ್ಲದೇ ಅನೇಕ ಹಿರಿಯ-ಕಿರಿಯ ಹಾಗೂ ಬಾಲ ಕಲಾ ಪ್ರತಿಭೆಗಳ ಹೆಸರನ್ನು ಇಲ್ಲಿ ಉದಾಹರಣೆಗೆ ಗಮಿನಿಸಬಹುದಾಗಿದೆ. ಇಂತಹ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುವು ಶ್ರೀಗಳ ದೊಡ್ಡಗುಣ ಎಂದೆ ಭಾವಿಸಬೇಕಾಗುತ್ತದೆ.

ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯರು ಪೀಠಾಧಿಪತಿಗಳು ಆದ ಮೇಲೆ ಸಾಮಾಜಿಕ ಕಾರ್ಯಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಅವರು ಉಚಿತ ಕಣ್ಣಿನ ತಪಾಸಣೆ ಶಿಬಿರ, ಕೃಷಿ ಮೇಳ, ಪಶುಗಳ ಪ್ರದರ್ಶನ, ಉಚಿತ ಆರೋಗ್ಯ ತಪಾಸಣೆ ಶಿಬಿರ, ಉಚಿತ ನೇತ್ರ ಚಿಕಿತ್ಸಾ ಶಿಬಿರ, ಉಚಿತ ರಕ್ತದಾನ ಶಿಬಿರಗಳನ್ನು ಏರ್ಪಡಿಸುವ ಮೂಲಕ ಈ ಭಾಗದ ಜನರ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸಿದ್ದಾರೆ. ಬಡದಲಿತ-ಹಿಂದುಳಿದ ಜನಾಂಗದವರಿಗೆ ತಮ್ಮ ಆರೋಗ್ಯ ಕಾಪಾಡುವಲ್ಲಿ ಸಾಧ್ಯವಾಗುತ್ತಿಲ್ಲ, ಆದನ್ನು ಉಚಿತವಾಗಿ ನೆರವೇರಿಸಿ ಪ್ರತಿ ವರ್ಷ ಶ್ರೀಗಳು ಕೊಡುತ್ತಿದ್ದಾರೆ. ಪೂಜ್ಯ ಶ್ರೀ ಚೆನ್ನವೀರ ಶಿವಾಚಾರ್ಯರು ಹಾಗೂ ಹಿಂದಿನ ಗುರುಗಳು ಸಹಿತ ಕನ್ನಡ ಉಳಿಸಿ- ಬೆಳೆಸಲು ಅನೇಕರಿಗೆ ಆಶ್ರಯ ನೀಡಿದ್ದರು. ಸೂಕ್ತ ಮಾರ್ಗದರ್ಶನ ಮಾಡುತ್ತ ಇಂದಿನ ಶ್ರೀಗಳು ನಿರಂತರವಾಗಿ ಕನ್ನಡದ ಬಗ್ಗೆ ಉಪನ್ಯಾಸ, ಗೋಷ್ಠಿ, ಚಿಂತನ-ಮಂಥನ ನಡೆಸುತ್ತ

ಬಂದಿದ್ದಾರೆ. ಅಲ್ಲದೆ ಹಾರಕೂಡದಲ್ಲಯೇ ಏಳನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ರಾಜ್ಯ ಮಟ್ಟದ ಸಮ್ಮೇಳನದಂತೆ ಅನೇಕ ವಿದ್ವಾಂಸರು ಪಾಲ್ಗೊಂಡಿದ್ದರು. ಮಹಿಳಾ ಸಾಹಿತಿ ಶ್ರೀಮತಿ ಯಶೋದಮ್ಮ ಸಿದ್ದಬಟ್ಟೆ ಸರ್ವಾಧ್ಯಕ್ಷರಾಗಿದ್ದರು. ಇಡಿ ಸಮ್ಮೇಳನದ ಜವಾಬ್ದಾರಿ ಶ್ರೀಗಳು ಹೊತ್ತುಕೊಂಡಿದ್ದರು. ಹೈದ್ರಾಬಾದ ಕರ್ನಾಟಕ ಪ್ರಥಮ ಕವಿ ಸಮ್ಮೇಳನ ಆಯೋಜಿಸುವ ಮೂಲಕ ಕನ್ನಡ ಪ್ರೇಮ ಮೆರದಿದ್ದಾರೆ. ಅಲ್ಲದೆ ಪ್ರತಿಭಾ ಪರಿಚಯ, ಶಾಲೆಗೊಂದು ಕನ್ನಡ ಕಾರ್ಯಕ್ರಮ, ಹೀಗೆ ಕನ್ನಡ ಸಾಹಿತ್ಯ ಪರ ಸಂಘಟನೆಗಳು ಅಲ್ಲಿಗೆ ಬಂದಾಗ ಅವರಿಗೆಲ್ಲ ಪ್ರೋತ್ಸಾಹ ನೀಡುತ್ತಿರುವುದು ಇಂದಿಗೂ ನಿರಂತರವಾಗಿ ನಡೆದೆಯಿದೆ.

ತಮ್ಮ ಗುರುಗಳಾದ ಲಿಂ. ಗುರುಲಿಂಗ ಶಿವಾಚಾರ್ಯರ ಪುಣ್ಯ ಸ್ಮರಣೋತ್ಸವದ ಸಂದರ್ಭದಲ್ಲಿ ಪ್ರತಿ ವರ್ಷ ಉಪನ್ಯಾಸ ಮಾಲಿಕೆ ಏರ್ಪಡಿಸುತ್ತಲಿದ್ದಾರೆ. ಎರಡು ಕೃತಿಗಳು ಮುದ್ರಣ ಮಾಡುತ್ತಾ ಬಂದಿದ್ದಾರೆ. ಲೇಖಕರಿಗೆ ಕಲಾವಿದರಿಗೆ, ಸಂಗೀತಗಾರರಿಗೆ ಬಡ ಮಕ್ಕಳಿಗೆ ಹಾಗೂ ಉತ್ತಮ ಫಲಿತಾಂಶ ಹೊಂದಿದ ವಿದ್ಯಾರ್ಥಿಗಳಿಗೆ ಸತ್ಕಾರ ಮಾಡಿ ಪ್ರೋತ್ಸಾಹ ನೀಡುತ್ತಿದ್ದಾರೆ. ತಮ್ಮ ಗುರುಗಳ ಪುಣ್ಯತಿದಿ ಸಾಹಿತ್ಯಕ ಕಾರ್ಯಕ್ರಮ ಮಾಡಿದ್ದಾರೆ. ಪ್ರಸ್ತುತ ಐವತ್ತಕ್ಕು ಹೆಚ್ಚು ಮೌಲಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಶ್ರೀಮಠದಿಂದ ಬರಿ ಭಾಷಣಗಳು ಆಗಬಾರದು ದಾಖಲೆಯಾಗಬೇಕೆಂಬ ಉದ್ದೇಶದಿಂದ ಪ್ರತಿ ವರ್ಷ ಪುಸ್ತಕ ಪ್ರಕಟಣೆ ಮಾಡುತ್ತಾ ಬಂದಿದ್ದಾರೆ. ನಾಡಿನ ಬಹುದೊಡ್ಡ ವಿದ್ವಾಂಸರು ಸಾಹಿತಿಗಳು ಕೃತಿ ನೀಡಿದ್ದಾರೆ. ಕಥೆ, ಕಾದಂಬರಿ, ನಾಟಕ, ಜಾನಪದ, ವೀರಶೈವ ಸಾಹಿತ್ಯ ವಚನ ಸಾಹಿತ್ಯ, ಚಿಂತನ, ಜೀವನ ಚರಿತ್ರೆ, ಸಂಶೋಧನೆ, ತತ್ವಪದ ಭಜನೆ ಭಾಷಾ ವಿಜ್ಞಾನ, ತೌಲನಿಕ, ಅಭಿನಂದನ ಗ್ರಂಥ, ಸಂಪಾದನೆ, ಸಂಕಿರಣ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲಾ ಕೃತಿಗಳನ್ನು ನಾಡಿನ ವಿದ್ವಾಂಸರು ವಿಮರ್ಶಕರು ಮೆಚ್ಚಿಕೊಂಡಿದ್ದಾರೆ. ಹಲವು ಪ್ರಶಸ್ತಿ ಗೌರವಗಳಿಗೆ ಭಾಜನವಾದ ಕೃತಿಗಳಾಗಿವೆ. ಬೆಳಕಿಗೆ ಬಾರದ ಏಷ್ಟೋ ವಿಷಯಗಳು ಕೃತಿಗಳನ್ನು ಹೊರತಂದ ಕೀರ್ತಿ ಶ್ರೀಗಳದ್ದಾಗಿದೆ. ಸೃಜನಶೀಲ ಹಾಗೂ ಸೃಜನೇತರ ಎಂಬ ಎರಡು ಪ್ರಕಾರದಲ್ಲಿ ಐವತ್ತಕ್ಕು ಹೆಚ್ಚು ಕೃತಿಗಳು ಹೊರ ಬಂದಿವೆ.

ಪೂಜ್ಯ ಶ್ರೀಗಳು ಕಲ್ಯಾಣ ನಾಡಿನಲ್ಲಿ ಪ್ರತಿಷ್ಠಿತವಾದ ಪ್ರಶಸ್ತಿ ನೀಡಬೇಕು. ಅದಕ್ಕೆ ಬೃಹತ್ ಮೊತ್ತವಾದ ಐವತ್ತು ಸಾವಿರ ರೂಪಾಯಿಗಳು, ಒಂದು ತೊಲ ಚಿನ್ನ ಪ್ರಶಸ್ತಿ ಫಲಕ ಹೊಂದಿದ ಪ್ರಶಸ್ತಿ ನೀಡಬೇಕೆಂದು ಸಂಕಲ್ಪ ಮಾಡಿ, ಪ್ರತಿಭಾನ್ವಿತ ಲೇಖಕರಿಗೆ ನೀಡಿದಿರು. ಇಲ್ಲಿಯೂ ಕೂಡಾ ಇಂದಿನ ಅನೇಕ ಕಲುಸಿತ ಸಮಾಜ ಧರ್ಮ ಬೇರೆನಿಸದೇ ಸಮನ್ವಯತೆ ಮತ್ತು ಏಕತೆಯು ಮೂಡಲಿ ಎಂಬ ಸದುದ್ದೇಶದಿಂದ ಶ್ರೀಚೆನ್ನ ರೇಣುಕ ಬಸವ ಎಂಬ ತ್ರಿವೇಣಿ ಸಂಗಮ ಶೀರ್ಷಿಕೆಯಡಿಯಲ್ಲಿ ಈ ಪ್ರಶಸ್ತಿ ನೀಡುತಲ್ಲಿದ್ದಾರೆ. ಭಾಷಾ ವಿಜ್ಞಾನಿ ಡಾ॥ ಸಂಗಮೇಶ ಸವದತ್ತಿಮಠರಿಗೆ, ನಾಟಕಕಾರ ಎಲ್.ಬಿ.ಕೆ ಅಲ್ದಾಳ ಅವರಿಗೆ ಹಾಗೂ ವಿದ್ಯಾ ವಾಚಸ್ಪತಿ ಡಾ॥ ಪಂಚಾಕ್ಷರಿ ಹಿರೇಮಠರಿಗೆ ನೀಡಿ ಗೌರವಿಸಿದ್ದಾರೆ. ಇದೊಂದು ಕರ್ನಾಟಕದಲ್ಲಿ ಬಹುದೊಡ್ಡ ಪ್ರಶಸ್ತಿಯಾಗಿದೆ. ಪ್ರಖ್ಯಾತವಾದ ಪ್ರಶಸ್ತಿಯಾಗಿದೆ ಎಂದೇ ಹೇಳಬೇಕಾಗುತ್ತದೆ.

ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯರು ಎಂ.ಎ ಕನ್ನಡ ಪದವಿಧರರು ಕನ್ನಡ ಸಾಹಿತ್ಯ ಸಂಸ್ಕೃತಿಯ ಬಗ್ಗೆ ಅಪಾರವಾದ ಪ್ರೀತಿ ಹೊಂದಿದವರು ಅವರ ಸಾಹಿತ್ಯದ ನಂಟು ಅಪಾರವಾದದ್ದು ಅವರಿಗೆ ಸಾಹಿತ್ಯದ ಹಂತಗಳು ಹಲವು. ವಿದ್ಯಾಭ್ಯಾಸ ಮಾಡುವಾಗಲೇ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡಿದರು. ತಮ್ಮ ಮಠಕ್ಕೆ ಬಂದ ಯಾರೇ ಸಾಹಿತಿಗಳಿರಲಿ ಅವರಿಗೆ ಗೌರವಿಸಿ ಪ್ರೋತ್ಸಾಹಿಸುವ ಕೆಲಸ ಮಾಡಿದ್ದಾರೆ. ಹಲವಾರು ಸಾಹಿತಿಗಳು ಬಂದಿದ್ದಾರೆ. ಸಿಪಿಕೆ, ವಿದ್ಯಾಶಂಕರ್, ಪಂಚಾಕ್ಷರಿ ಹಿರೇಮಠ, ಸವದತ್ತಿಮಠ, ಎಂ.ಎಸ್.ಲಠ್ಠೆ, ಸಿ.ನಾಗಭೂಷಣ ಮುಂತಾದವರ ಪಡೆಯೇ ಇಲ್ಲಿ ಬಂದು ಉಪನ್ಯಾಸ ನೀಡಿದ್ದಾರೆ.

ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯರು ಶಿಕ್ಷಣದ ಬಗ್ಗೆ ಅಪಾರ ನಂಬುಗೆ ಹೊಂದಿದ್ದಾರೆ. ಎಲ್ಲಾ ಜಾತಿ ಮತ ಪಂಗಡವೆನ್ನದೇ ಮುಕ್ತವಾಗಿ ಶಿಕ್ಷಣಾಭ್ಯಾಸವನ್ನು ಕೈಗೊಳ್ಳಬೇಕೆಂಬ ಉದ್ದೇಶದಿಂದ ಶಿಕ್ಷಣ ಸಂಸ್ಥೆ ಪ್ರಾರಂಭಿಸಿದ್ದಾರೆ. ಶ್ರೀ ಹಾರಕೂಡ ಚೆನ್ನಬಸವೇಶ್ವರ ಶಿಕ್ಷಣ ಪ್ರತಿಷ್ಠನ 1999ರಲ್ಲಿ ಸ್ಥಾಪಿಸಿದ್ದಾರೆ. ಆ ಮೂಲಕ 1999ರಲ್ಲಿ ಶ್ರೀಚೆನ್ನಬಸವೇಶ್ವರ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ ಚಿಂಚೋಳಿಯಲ್ಲಿ ಪ್ರಾರಂಭಿಸಲಾಯಿತು. ಈಗ ಹೈಸ್ಕೂಲ ಹಂತ ಮುಟ್ಟಿದೆ. ಪ್ರತಿಷ್ಠಿತ ಶಾಲೆಯಾಗಿ ಹೊರಹೊಮ್ಮಿದೆ. ಭಾಲ್ಕಿ ತಾಲೂಕಿನ ಭಾಲ್ಕಿಯಲ್ಲಿಯೆ ಶ್ರೀಜಗಜ್ಯೋತಿ ಬಸವೇಶ್ವರ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ ಇಂದು ಪ್ರೌಢಶಾಲೆಯಾಗಿ ಪದವಿ ಪೂರ್ವ ಕಾಲೇಜು ಕೂಡ ಆಗಿದೆ. ಶ್ರೀ ಗುರುಲಿಂಗ ಶಿವಾಚಾರ್ಯ ಉಚಿತ ವಸತಿ ಕಿರಿಯ ಪ್ರಾಥಮಿಕ ಶಾಲೆ ಪ್ರಾರಂಭಿಸಿದ್ದಾರೆ. ಹಾರಕೂಡದಲ್ಲಿಯೇ ಈ ಶಿಕ್ಷಣ ಸಂಸ್ಥೆ ಬಹು ಜನ ಮೆಚ್ಚುಗೆ ಪಡೆದಿದೆ. ಉಚಿತವಾದ ಶಿಕ್ಷಣ ನೀಡುವುದು ಕೂಡ ಒಂದು ಭಾಗ್ಯವಾಗಿದೆ. ಪ್ರೌಢಶಾಲೆಯಾಗಿ ಈಗ ಮಾರ್ಪಾಡಾಗಿದೆ. ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ಸಾವಿರಾರು ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿರುವುದು ಹೆಮ್ಮೆಯ ಸಂಗಿತ. ಎಲ್ಲರಿಗೂ ಸಂತಸವಾಗುವ ಕಾರ್ಯ ಮಾಡಿದ್ದಾರೆ.

ಕಲ್ಯಾಣ ಕರ್ನಾಟಕದಲ್ಲಿಯೇ ದಾಸೋಹ ಪರಂಪರೆಯನ್ನು ನಿಜವಾಗಿ ಅಷ್ಟೇ ಕ್ರಮಬದ್ಧವಾಗಿ ಕಾಪಾಡಿಕೊಂಡು ಮುನ್ನಡೆಸಿಕೊಂಡು ಬಂದ ಶ್ರೀಗಳು ಯಾರಾದರೂ ಇದ್ದಾರೇ ಎಂದರೆ ಅದು ಚೆನ್ನವೀರ ಶಿವಾಚಾರ್ಯರು ಒಬ್ಬರೆ! ದಿನನಿತ್ಯ ಸಾವಿರಾರು ಭಕ್ತರು ಜನರು ಬರುತ್ತಾರೆ. ಪೂಜ್ಯ ಶ್ರೀಗಳು ಏನು ಸ್ವೀಕರಿಸುತ್ತಾರೋ ಅದೇ ದಾಸೋಹ. ಎಲ್ಲಾ ಭಕ್ತರಿಗೂ ಇರುತ್ತದೆ. ಪ್ರತಿ ಸೋಮವಾರ ಎರಡು ಮೂರು ಸಾವಿರ ಜನ ಭಕ್ತರು ಬಂದರೆ ಅಮವಾಸ್ಯೆಗೆ ಹತ್ತು ಸಾವಿರ ಭಕ್ತರು ಬರುತ್ತಾರೆ. ಜಾತ್ರೆ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಲಕ್ಷಾಂತರ ಜನಸಮೂಹ ಬಂದು ನೆರೆಯುತ್ತಾರೆ. ಅವರಿಗೆಲ್ಲ ಮುಕ್ತವಾದ ದಾಸೋಹವನ್ನು ಏರ್ಪಡಿಸಿದ್ದಾರೆ. ಎಲ್ಲೂ ಕಾಣದ ಕಂಡರಿಯದ ಅದ್ಭುತವಾದ ದಾಸೋಹದ ವ್ಯವಸ್ಥೆಯನ್ನು ಮಾಡಿದ್ದಾರೆ.

ಕಲ್ಯಾಣ ನಾಡಿನಲ್ಲಿ ಹಾರಕೂಡದ ಹಿರೇಮಠ ಸಂಸ್ಥಾನ ಮಠದಲ್ಲಿ ಭಕ್ತಿ, ಜ್ಞಾನ, ಶಿಕ್ಷಣಗಳ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಪರವಾದ ಕಾರ್ಯಕ್ರಮಗಳು ನಿರಂತರವಾಗಿ ನಡೆದು ಬಂದಿವೆ. ಶ್ರೀಮಠದಲ್ಲಿ ನಡೆಯುತ್ತಿರುವ ಸಹಪಂಕ್ತಿ ಭೋಜನ, ಸರ್ವರಿಗೂ ಸಮತೆಯಿಂದ ನೀಡುತ್ತಿರುವ ಮುಕ್ತ ಅವಕಾಶಗಳು ಇಂದಿನ ಮಠಗಳಿಗೆ ಮಾದರಿಯಾದವುಗಳು. ಸಹಾಯ ಯಾಚಿಸಿ ಬಂದವರಿಗೆ ಅಭಯನಿಡಿ ಕಾಪಾಡೂವ ಪೂಜ್ಯ ಡಾ. ಚನ್ನವೀರ ಶಿವಾಚಾರ್ಯರು ಹಾರಕೂಡ ಸುಕ್ಷೇತ್ರವನ್ನು ಭಕ್ತರ ಕಾಮದೇನು, ಕಲ್ಪತರುವನ್ನಾಗಿಸಿದ್ದಾರೆ. ಅವರ ಮಾತೃಹೃದಯದ ಮನಸ್ಸು ಸರ್ವರನ್ನು ಆಕರ್ಷಿಸಿ ಅಪಾರ ಭಕ್ತನ್ನು ಶ್ರೀಮಠಕ್ಕೆ ಕರೆತರುತ್ತಿರುವುದು ದಿನೆ ದಿನೆ ಇಮ್ಮಡಿಗೊಳ್ಳುತ್ತಿದೆ. ಆದ್ದರಿಂದ ಹಾರಕೂಡ ಸಂಸ್ಥಾನವನ್ನು ಕಣ್ಯಾಣ ನಾಡಿನ ಕಲ್ಪತರು ಎಂದರೆ ಅತಿಶಯೋಕ್ತಿ ಆಗಲಾರದು.

**ಆಕರ ಗ್ರಂಥಗಳು**


1. ಹಾರಕೂಡ ಶ್ರೀ ಚನ್ನಬಸವೇಶ್ವರ ಚರಿತ್ರೆ -ಶ್ರೀ ಗೋಪಿಕಾದೇವಿ ದೇಶಮುಖ
2. ಕಲ್ಯಾಣ ನಾಡಿನ ಪರಂಜ್ಯೋತಿ - (ಸಂ) ಡಾ. ಎಂ. ಎಸ್. ಲಠ್ಠೆ,
3. ಮಲ್ಲಿನಾಥ ಹಿರೇಮಠ, ಡಾ.ಹೆಚ್.ಕಾಶೀನಾಥರೆಡ್ಡಿ
4. ಸದ್ಗುರು ಶ್ರೀಚನ್ನಬಸವ ಶಿವಯೋಗಿಗಳ ಪುರಾಣ - (ಸಂ) ಡಾ. ಸಂಗಮೇಶ ಸವದತ್ತಿಮಠ
5. ಕಲ್ಪವೃಕ್ಷ -ಡಾ. ಸಿ. ಪಿ. ಕೆ., ಬೆಂಗಳೂರು
6. ಹಾರಕೂಡ ಶ್ರೀಚನ್ನಬಸವ ಶಿವಯೋಗಿ ಮಹಾತ್ಮೆ -ಎಲ್. ಬಿ.ಕೆ. ಆಲ್ದಾಳ, ಮಳ್ಳಿ
7. ಕಲ್ಯಾಣ ನಾಡಿನಲ್ಲಿ ವೀರಭದ್ರ -ಡಾ. ಎಮ್. ಜಿ. ನಾಗರಾಜ. ಬೆಂಗಳೂರು.